





**(ಅವತೀರ್ಣ - ಮದೀನಾದಲ್ಲಿ)**

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسۡمِ اللّٰهِ الرَّحۡمٰنِ الرَّحِيۡمِ

1. ಸಂದೇಶವಾಹಕರೇ, ನಾವು ನಿಮಗೆ ಸುಸ್ಪಷ್ಟ ವಿಜಯ ಪ್ರದಾನ ಮಾಡಿದೆವು-[1]

اِنَّا فَتَحۡنَا لَكَ فَتۡحًا مُّبِيۡنًا ۙ﴿۱﴾

2. ಅಲ್ಲಾಹನು ನಿಮ್ಮ ಹಿಂದಿನ ಹಾಗೂ ಮುಂದಿನ ಎಲ್ಲ ತಪ್ಪುಗಳನ್ನು ಕ್ಷಮಿಸಲಿಕ್ಕಾಗಿ,[2] ನಿಮ್ಮ ಮೇಲೆ ತನ್ನ ಅನುಗ್ರಹವನ್ನು ಪರಿಪೂರ್ಣಗೊಳಿಸಲಿಕ್ಕಾಗಿ, ನಿಮಗೆ ಸನ್ಮಾರ್ಗವನ್ನು ತೋರಿಸಲಿಕ್ಕಾಗಿ-[3]

لِّيَـغۡفِرَ لَكَ اللّٰهُ مَا تَقَدَّمَ مِنۡ ذَنۡۢبِكَ
وَمَا تَاَخَّرَ وَيُتِمَّ نِعۡمَتَهٗ عَلَيۡكَ
وَيَهۡدِيَكَ صِرَاطًا مُّسۡتَقِيۡمًا ۙ﴿۲﴾

3. ಮತ್ತು ನಿಮಗೆ ಪ್ರಚಂಡ ಸಹಾಯವನ್ನು ನೀಡಲಿಕ್ಕಾಗಿ.

وَّيَنۡصُرَكَ اللّٰهُ نَصۡرًا عَزِيۡزًا ﴿۳﴾

4. ಅವನೇ, ಸತ್ಯವಿಶ್ವಾಸಿಗಳ ಹೃದಯಗಳಲ್ಲಿ ಪ್ರಶಾಂತತೆಯನ್ನು ಇಳಿಸಿದವನು.[4] ಅವರು ತಮ್ಮ ವಿಶ್ವಾಸದ ಮೇಲೆ ವಿಶ್ವಾಸವನ್ನು

هُوَ الَّذِىۡۤ اَنۡزَلَ السَّكِيۡنَةَ فِىۡ قُلُوۡبِ
الۡمُؤۡمِنِيۡنَ لِيَزۡدَادُوۡۤا اِيۡمَانًا مَّعَ

---

1. ಹುದೈಬಿಯಾ ಸಂಧಿಯ ನಂತರ 'ವಿಜಯ' ಎಂಬ ಸುವಾರ್ತೆಯನ್ನು ತಿಳಿಸಲಾದಾಗ ಇದೆಂತಹ ವಿಜಯ! ಇದರಲ್ಲಿ ಮೇಲ್ನೋಟಕ್ಕೆ ಕಾಣುವಂತೆ ಸತ್ಯನಿಷೇಧಿಗಳು ನಮಗೆ ಒಡ್ಡ ಬಯಸಿದ್ದ ಶರತ್ತುಗಳನ್ನೆಲ್ಲಾ ನಾವು ಒಪ್ಪಿಕೊಂಡಿದ್ದೇವೆ ಎಂದು ಜನರು ಅಚ್ಚರಿಗೊಂಡಿದ್ದರು. ಆದರೆ ಕೆಲವೇ ಸಮಯದ ನಂತರ ನಿಜವಾಗಿಯೂ ಅದೊಂದು ಮಹಾನ್ ವಿಜಯವಾಗಿತ್ತು ಎಂದು ಅವರಿಗೆ ಮನವರಿಕೆಯಾಯಿತು.
2. ಈ ಮಾತನ್ನು ಹೇಳಲಾದ ಹಿನ್ನೆಲೆಯನ್ನು ಗಮನಿಸಿದರೆ, ಇಲ್ಲಿ ಯಾವ ದೋಷಗಳನ್ನು ಕ್ಷಮಿಸುವ ಬಗ್ಗೆ ಹೇಳಲಾಗಿದೆಯೋ ಅದು ಕಳೆದ 19 ವರ್ಷಗಳಲ್ಲಿ ಪ್ರವಾದಿವರ್ಯರ(ಸ) ನೇತೃತ್ವದಲ್ಲಿ ಇಸ್ಲಾಮಿನ ವಿಜಯ ಮತ್ತು ಉತ್ತುಂಗತೆಗಾಗಿ ನಡೆಸಿದ ಹೋರಾಟದ ವೇಳೆ ಸಂಭವಿಸಿರಬಹುದಾದ ದೋಷಗಳಾಗಿವೆ ಎಂದು ಭಾಸವಾಗುತ್ತದೆ. ಆ ದೋಷಗಳ ಬಗ್ಗೆ ಯಾವುದೇ ವ್ಯಕ್ತಿಗೆ ತಿಳುವಳಿಕೆ ಇರಲು ಸಾಧ್ಯವಿಲ್ಲ. ಮಾನವನ ಬುದ್ಧಿ ಆ ಹೋರಾಟದಲ್ಲಿ ಯಾವುದೇ ರೀತಿಯ ದೋಷ ಹುಡುಕಲು ಅಸಮರ್ಥವಾಗಿದೆ. ಆದರೆ ಅಲ್ಲಾಹನ ದೃಷ್ಟಿಯಲ್ಲಿರುವ ಪರಿಪೂರ್ಣತೆಯ ಉನ್ನತ ಮಾನದಂಡದ ಆಧಾರದಲ್ಲಿ ಅದರಲ್ಲಿ ಕೆಲವು ದೋಷಗಳು ಇದ್ದುವು. ಅದರ ಆಧಾರದಲ್ಲಿ ಅರೇಬಿಯಾದ ಮುಶ್ರಿಕರ ವಿರುದ್ಧ ಮುಸ್ಲಿಮರಿಗೆ ಅಷ್ಟು ತ್ವರಿತವಾದ ವಿಜಯ ಪ್ರಾಪ್ತವಾಗಲು ಸಾಧ್ಯವಿರಲಿಲ್ಲ. ಅರ್ಥಾತ್ ಈ ದೋಷಗಳ ಜತೆಗೆ ಹೋರಾಡಿದರೆ ಅರೇಬಿಯಾವನ್ನು ನೀವು ಅಧೀನಗೊಳಿಸಲು ಇನ್ನೂ ಹಲವಾರು ದೌರ್ಬಲ್ಯಗಳನ್ನು ಮನ್ನಿಸಿ ನಮ್ಮ ಅನುಗ್ರಹದ ಮೂಲಕ ನಿಮಗೆ ಕ್ಷಮೆ ನೀಡಿದೆವು. ನಿಮಗೆ ನಿಮ್ಮ ಪ್ರಯತ್ನಗಳಿಂದ ಮಾತ್ರ ದೊರಕಲು ಸಾಧ್ಯವಿಲ್ಲದಂತಹ ವಿಜಯದ ಬಾಗಿಲನ್ನು ಹುದೈಬಿಯಾದ ಬಳಿ ನಿಮ್ಮ ಪಾಲಿಗೆ ತೆರೆದೆವು.
3. ಇಲ್ಲಿ ಪ್ರವಾದಿವರ್ಯರಿಗೆ(ಸ) ನೇರಮಾರ್ಗ ತೋರಿಸುವುದೆಂದರೆ ಅವರಿಗೆ ವಿಜಯ ಮತ್ತು ಯಶಸ್ಸಿನ ಮಾರ್ಗ ತೋರಿಸುವುದಾಗಿದೆ.
4. 'ಸಕೀನತ್'(ಪ್ರಶಾಂತತೆ) ಎಂದರೆ ನೆಮ್ಮದಿ ಮತ್ತು ಚಿತ್ತ ಸಮಾಧಾನವಾಗಿದೆ. ಹುದೈಬಿಯಾ ಸಂಧಿಯ ವೇಳೆ ಎದುರಾದ ಪ್ರಕ್ಷುಬ್ಧ

ಹೆಚ್ಚಿಸಿಕೊಳ್ಳುವಂತಾಗಲಿಕ್ಕಾಗಿ. ಭೂಮಿ- ಆಕಾಶಗಳ ಸಕಲ ಸೇನೆಗಳೂ ಅಲ್ಲಾಹನ ನಿಯಂತ್ರಣದಲ್ಲಿವೆ ಮತ್ತು ಅವನು ಸರ್ವಜ್ಞನೂ ಯುಕ್ತಿವಂತನೂ ಆಗಿರುತ್ತಾನೆ.

اِيۡمَانِهِمۡ ؕ وَلِلّٰهِ جُنُوۡدُ السَّمٰوٰتِ وَ
الۡاَرۡضِ ؕ وَكَانَ اللّٰهُ عَلِيۡمًا حَكِيۡمًا ﴿٤﴾

5. ಸತ್ಯವಿಶ್ವಾಸಿ ಪುರುಷರನ್ನು ಮತ್ತು ಸ್ತ್ರೀಯರನ್ನು ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವಂತಹ ಸ್ವರ್ಗೋದ್ಯಾನಗಳಲ್ಲಿ ಪ್ರವೇಶಗೊಳಿಸಲಿಕ್ಕಾಗಿ ಮತ್ತು ಅವರ ದೋಷಗಳನ್ನು ಅವರಿಂದ ದೂರಗೊಳಿಸಲಿಕ್ಕಾಗಿ (ಅವನು ಹೀಗೆ ಮಾಡಿರುವನು)- ಅಲ್ಲಾಹನ ಬಳಿ ಇದು ಮಹಾ ವಿಜಯವಾಗಿದೆ-

لِّيُدۡخِلَ الۡمُؤۡمِنِيۡنَ وَالۡمُؤۡمِنٰتِ جَنّٰتٍ
تَجۡرِىۡ مِنۡ تَحۡتِهَا الۡاَنۡهٰرُ خٰلِدِيۡنَ فِيۡهَا
وَيُكَفِّرَ عَنۡهُمۡ سَيِّاٰتِهِمۡ ؕ وَكَانَ ذٰلِكَ
عِنۡدَ اللّٰهِ فَوۡزًا عَظِيۡمًا ﴿٥﴾

6. ಮತ್ತು ಅವನು, ಅಲ್ಲಾಹನ ಕುರಿತು ಕೆಟ್ಟ ಭಾವನೆಗಳನ್ನಿಟ್ಟುಕೊಂಡಿದ್ದ ಕಪಟವಿಶ್ವಾಸಿ ಸ್ತ್ರೀ-ಪುರುಷರನ್ನೂ ಬಹುದೇವಾರಾಧಕ ಸ್ತ್ರೀ-ಪುರುಷರನ್ನೂ ಶಿಕ್ಷಿಸಲಿಕ್ಕಾಗಿ (ಹೀಗೆ ಮಾಡಿರುವನು). ಅವರು ತಾವಾಗಿಯೇ ಕೆಡುಕಿನ ಸುಳಿಗೆ ಸಿಲುಕಿಕೊಂಡರು. ಅವರ ಮೇಲೆ ಅಲ್ಲಾಹನ ಕ್ರೋಧವೆರಗಿತು, ಅವನು ಅವರನ್ನು ಶಪಿಸಿದನು ಮತ್ತು ಅವರಿಗಾಗಿ ಅತ್ಯಂತ ಕೆಟ್ಟ ವಾಸಸ್ಥಾನವಾಗಿರುವ ನರಕವನ್ನು ಸಿದ್ಧಪಡಿಸಿಟ್ಟನು.

وَّيُعَذِّبَ الۡمُنٰفِقِيۡنَ وَالۡمُنٰفِقٰتِ وَ
الۡمُشۡرِكِيۡنَ وَالۡمُشۡرِكٰتِ الظَّآنِّيۡنَ
بِاللّٰهِ ظَنَّ السَّوۡءِ ؕ عَلَيۡهِمۡ دَآئِرَةُ السَّوۡءِ ۚ
وَغَضِبَ اللّٰهُ عَلَيۡهِمۡ وَلَعَنَهُمۡ وَاَعَدَّ
لَهُمۡ جَهَنَّمَ ؕ وَسَآءَتۡ مَصِيۡرًا ﴿٦﴾

7. ಭೂಮಿ-ಆಕಾಶಗಳ ಸೇನೆಗಳೆಲ್ಲ ಅಲ್ಲಾಹನ ನಿಯಂತ್ರಣದಲ್ಲಿವೆ ಮತ್ತು ಅವನು ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

وَلِلّٰهِ جُنُوۡدُ السَّمٰوٰتِ وَالۡاَرۡضِ ؕ
وَكَانَ اللّٰهُ عَزِيۡزًا حَكِيۡمًا ﴿٧﴾

8. ಸಂದೇಶವಾಹಕರೇ, ನಾವು ನಿಮ್ಮನ್ನು ಸಾಕ್ಷ್ಯ ನೀಡುವವರಾಗಿ,[5] ಸುವಾರ್ತೆ ನೀಡುವವರಾಗಿ ಮತ್ತು ಎಚ್ಚರಿಕೆ ನೀಡುವವರಾಗಿ ಮಾಡಿ ಕಳುಹಿಸಿರುತ್ತೇವೆ-

اِنَّاۤ اَرۡسَلۡنٰكَ شَاهِدًا وَّمُبَشِّرًا
وَّنَذِيۡرًا ﴿٨﴾

9. ಜನರೇ, ನೀವು ಅಲ್ಲಾಹನ ಹಾಗೂ ಅವನ ಸಂದೇಶವಾಹಕರ ಮೇಲೆ ವಿಶ್ವಾಸವಿರಿಸಬೇಕು, ಅವರಿಗೆ(ಪ್ರವಾದಿಗೆ) ನೆರವಾಗಬೇಕು, ಅವರನ್ನು ಗೌರವಿಸಬೇಕು ಮತ್ತು ಬೆಳಗು ಬೈಗುಗಳಲ್ಲಿ ಅಲ್ಲಾಹನನ್ನು ಸ್ತುತಿಸಬೇಕೆಂದು.

لِّتُؤۡمِنُوۡا بِاللّٰهِ وَرَسُوۡلِهٖ وَتُعَزِّرُوۡهُ
وَتُوَقِّرُوۡهُ ؕ وَتُسَبِّحُوۡهُ بُكۡرَةً
وَّاَصِيۡلًا ﴿٩﴾

10. ಸಂದೇಶವಾಹಕರೇ, ನಿಮ್ಮೊಂದಿಗೆ ಆಜ್ಞಾನುಸರಣೆಯ ಕರಾರು

اِنَّ الَّذِيۡنَ يُبَايِعُوۡنَكَ اِنَّمَا يُبَايِعُوۡنَ

ಸ್ಥಿತಿಯಲ್ಲಿ ಮುಸ್ಲಿಮರು ತೋರಿದ ಸಹನೆ ಮತ್ತು ಪ್ರವಾದಿವರ್ಯರ(ಸ) ನಾಯಕತ್ವದ ಬಗ್ಗೆ ಪ್ರಕಟಿಸಿದ ಪರಿಪೂರ್ಣ ವಿಶ್ವಾಸ ಮತ್ತು ಆ ಸನ್ನಿವೇಶಗಳಿಂದ ಸಾಂಗವಾಗಿ ಪಾರಾದ ರೀತಿ ಎಲ್ಲವೂ ಅಲ್ಲಾಹನ ಅನುಗ್ರಹದ ಪರಿಣಾಮವಾಗಿದೆ. ಅನ್ಯಥಾ ಆ ಸಂದರ್ಭದ ಕಿಂಚಿತ್ ತಪ್ಪು ಕೂಡ ಕೆಲಸವನ್ನೆಲ್ಲಾ ಕೆಡಿಸಿ ಬಿಡಬಹುದಾಗಿತ್ತು.

5. ಶಾ ವಲಿಯುಲ್ಲಾಃರವರು(ರ) 'ಶಾಹಿದ್' ಪದವನ್ನು 'ಸತ್ಯವನ್ನು ಪ್ರಕಟಿಸುವವನು' ಎಂದು ಅನುವಾದಿಸಿದ್ದಾರೆ. ಅದರ ಅರ್ಥ 'ಸತ್ಯದ ಸಾಕ್ಷ್ಯವಹಿಸುವವನು' ಎಂದಾಗಿದೆ.

ಮಾಡುತ್ತಿದ್ದವರು[6] ವಾಸ್ತವದಲ್ಲಿ ಅಲ್ಲಾಹನೊಂದಿಗೆ ಆಜ್ಞಾನುಸರಣೆಯ ಕರಾರು ಮಾಡುತ್ತಿದ್ದರು. ಅವರ ಹಸ್ತಗಳ ಮೇಲೆ ಅಲ್ಲಾಹನ ಹಸ್ತವಿತ್ತು.[7] ಇನ್ನು ಈ ಕರಾರನ್ನು ಉಲ್ಲಂಘಿಸುವವನ ಮೇಲೆಯೇ ಆ ಉಲ್ಲಂಘನೆಯ ಅಪರಾಧವಿರುವುದು. ಯಾರು ಅಲ್ಲಾಹನೊಂದಿಗೆ ಮಾಡಿದ ಈ ಕರಾರನ್ನು ಪಾಲಿಸುವನೋ ಅವನಿಗೆ ಅಲ್ಲಾಹನು ಶೀಘ್ರುವೇ ಭಾರೀ ಪ್ರತಿಫಲವನ್ನು ದಯಪಾಲಿಸುವನು.

اللَّهَ ۚ يَدُ اللَّهِ فَوْقَ أَيْدِيهِمْ ۚ فَمَن
نَّكَثَ فَإِنَّمَا يَنكُثُ عَلَىٰ نَفْسِهِ ۖ وَمَنْ
أَوْفَىٰ بِمَا عَاهَدَ عَلَيْهُ اللَّهَ فَسَيُؤْتِيهِ
أَجْرًا عَظِيمًا ﴿١٠﴾

11. ಸಂದೇಶವಾಹಕರೇ, ಹಿಂದೆ ಬಿಡಲ್ಪಟ್ಟಿದ್ದ ಅರಬ್ ಹಳ್ಳಿಗರು[8] ಖಂಡಿತ ನಿಮ್ಮ ಬಳಿ ಬಂದು- "ನಮ್ಮ ಸಂಪತ್ತು ಮತ್ತು ಮನೆ ಮಂದಿಯ ಚಿಂತೆಯು ನಮ್ಮನ್ನು ಕಾರ್ಯಮಗ್ನವಾಗಿರಿಸಿತ್ತು. ನಮ್ಮ ಕ್ಷಮೆಗಾಗಿ ತಾವು ಪ್ರಾರ್ಥಿಸಿರಿ" ಎಂದು ಹೇಳುವರು. ಇವರು ತಮ್ಮ ಮನಸ್ಸುಗಳಲ್ಲಿಲ್ಲದ ಮಾತುಗಳನ್ನು ನಾಲಿಗೆಗಳಿಂದ ಆಡುತ್ತಾರೆ. ಇವರೊಡನೆ ಹೇಳಿರಿ- "ಸರಿ, ಹಾಗಾದರೆ ಅಲ್ಲಾಹನು ನಿಮಗೆ ಹಾನಿಯನ್ನುಂಟು ಮಾಡಲು ಇಚ್ಛಿಸಿದರೆ ಅಥವಾ ಲಾಭವನ್ನುಂಟು ಮಾಡಲು ಇಚ್ಛಿಸಿದರೆ, ನಿಮ್ಮ ವಿಷಯದಲ್ಲಿ ಅಲ್ಲಾಹನ ತೀರ್ಮಾನವನ್ನು ತಡೆಯಲು ಕಿಂಚಿತ್ತಾದರೂ ಅಧಿಕಾರವುಳ್ಳವರು ಯಾರಿದ್ದಾರೆ? ನಿಮ್ಮ ಕರ್ಮಗಳನ್ನಂತು ಅಲ್ಲಾಹನೇ ಬಲ್ಲನು. (ಆದರೆ ನೀವು ಹೇಳುತ್ತಿರುವುದು ಸತ್ಯವಲ್ಲ)

سَيَقُولُ لَكَ الْمُخَلَّفُونَ مِنَ الْأَعْرَابِ
شَغَلَتْنَا أَمْوَالُنَا وَأَهْلُونَا فَاسْتَغْفِرْ لَنَا ۚ
يَقُولُونَ بِأَلْسِنَتِهِم مَّا لَيْسَ فِي
قُلُوبِهِمْ ۚ قُلْ فَمَن يَمْلِكُ لَكُم
مِّنَ اللَّهِ شَيْئًا إِنْ أَرَادَ بِكُمْ ضَرًّا
أَوْ أَرَادَ بِكُمْ نَفْعًا ۚ بَلْ كَانَ اللَّهُ
بِمَا تَعْمَلُونَ خَبِيرًا ﴿١١﴾

12. ವಾಸ್ತವದಲ್ಲಿ ಸಂದೇಶವಾಹಕರು ಮತ್ತು ಸತ್ಯವಿಶ್ವಾಸಿಗಳು ತಮ್ಮ ಮನೆಗಳಿಗೆ ಖಂಡಿತ ಮರಳಲಾರರು ಎಂದು ನೀವು ಭಾವಿಸಿಕೊಂಡಿದ್ದಿರಿ. ಈ ವಿಚಾರವು ನಿಮ್ಮ ಮನಸ್ಸುಗಳಿಗೆ ಬಹಳ ಹಿತಕರವೆನಿಸಿತು. ನೀವು ಬಹಳ ಕೆಟ್ಟ ಗುಮಾನಿಗಳನ್ನು ಮಾಡಿದಿರಿ. ನೀವು ಅತ್ಯಂತ ದುಷ್ಟರಾಗಿರುತ್ತೀರಿ."

بَلْ ظَنَنتُمْ أَن لَّن يَنقَلِبَ الرَّسُولُ
وَالْمُؤْمِنُونَ إِلَىٰ أَهْلِيهِمْ أَبَدًا وَزُيِّنَ
ذَٰلِكَ فِي قُلُوبِكُمْ وَظَنَنتُمْ ظَنَّ السَّوْءِ
وَكُنتُمْ قَوْمًا بُورًا ﴿١٢﴾

6. ಇದು ಹ. ಉಸ್ಮಾನ್(ರ) ಹುತಾತ್ಮರಾದರೆಂಬ ಸುದ್ದಿ ತಿಳಿದು ಪ್ರವಾದಿವರ್ಯರು(ಸ) ತಮ್ಮ ಅನುಚರರೊಂದಿಗೆ ಮಕ್ಕಾದ ಹುದೈಬಿಯಾ ಎಂಬ ಸ್ಥಳದಲ್ಲಿ ಮಾಡಿದ ಪ್ರತಿಜ್ಞೆಯ ಕಡೆಗಿರುವ ಸೂಚನೆ. ಹ. ಉಸ್ಮಾನ್(ರ) ಹುತಾತ್ಮರಾದ ಸುದ್ದಿ ನಿಜವೆಂದಾದರೆ ನಾವು ಇದೇ ಸ್ಥಳದಲ್ಲಿ ಈಗಲೇ ಕುರೈಶರನ್ನು ಎದುರು ಹಾಕಿಕೊಳ್ಳಬೇಕು. ಪರಿಣಾಮವಾಗಿ ನಾವೆಲ್ಲರೂ ಸಾಯಬೇಕಾಗಿ ಬಂದರೂ ಸರಿ ಎಂಬುದರ ಕುರಿತು ಈ ಪ್ರತಿಜ್ಞೆ ಪಡೆಯಲಾಗಿತ್ತು.

7. ಅರ್ಥಾತ್- ಯಾವ ಪ್ರವಾದಿವರ್ಯರ(ಸ) ಕೈಯಲ್ಲಿ ನೀವು ಪ್ರತಿಜ್ಞೆ ಮಾಡುತ್ತಿದ್ದೀರೋ ಅದು ಅಲ್ಲಾಹನ ಪ್ರತಿನಿಧಿಯ ಕೈಯಾಗಿದೆ. ಈ ಪ್ರತಿಜ್ಞೆ ನಿಜವಾಗಿ ಪ್ರವಾದಿವರ್ಯರ(ಸ) ಮೂಲಕ ಅಲ್ಲಾಹನ ಜತೆಗೆ ನಡೆಯುತ್ತಿದೆ.

8. ಉಮ್ರಾದ ಸಿದ್ಧತೆ ಮಾಡುವ ವೇಳೆ ಪ್ರವಾದಿವರ್ಯರು(ಸ) ಮದೀನಾದ ಸುತ್ತಮುತ್ತಲಿನ ಕೆಲವು ಜನರಿಗೆ ತಮ್ಮ ಜತೆಗೆ ಹೊರಡುವ ಕರೆ ನೀಡಿದ್ದರು. ಆದರೆ ಸತ್ಯವಿಶ್ವಾಸದ ಬಗ್ಗೆ ವಾದಿಸಿಕೊಳ್ಳುತ್ತಿದ್ದ ಅವರು ಪ್ರಾಣದ ಮೇಲಿನ ಮೋಹದಿಂದ ತಮ್ಮ ಮನೆಯನ್ನು ಬಿಟ್ಟು ಹೊರಡಲು ಸಿದ್ಧರಾಗಿರಲಿಲ್ಲ. ಈ ವೇಳೆ ಕುರೈಶರ ನಿವಾಸಕ್ಕೆ ಉಮ್ರಾ ಮಾಡಲು ಹೋಗುವುದು ಮೃತ್ಯು ದವಡೆಗೆ ಹೋದಂತೆ ಎಂದು ಅವರು ಭಾವಿಸಿದ್ದರು. ಈ ವ್ಯಕ್ತಿಗಳ ಬಗ್ಗೆಯೇ ಇಲ್ಲಿ ಪ್ರಸ್ತಾಪಿಸಲಾಗಿದೆ.

13. ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಮೇಲೆ ವಿಶ್ವಾಸವಿಡದ ಸತ್ಯನಿಷೇಧಿಗಳಿಗಾಗಿ ನಾವು ಧಗಧಗಿಸುವ ಅಗ್ನಿಯನ್ನು ಸಿದ್ಧ ಗೊಳಿಸಿಟ್ಟಿರುತ್ತೇವೆ.

وَمَنْ لَّمْ يُؤْمِنْ بِاللّٰهِ وَرَسُوْلِهٖ فَاِنَّآ
اَعْتَدْنَا لِلْكٰفِرِيْنَ سَعِيْرًا ﴿١٣﴾

14. ಅಲ್ಲಾಹನೇ ಭೂಮಿ-ಆಕಾಶಗಳ ಆಧಿಪತ್ಯದ ಒಡೆಯನು. ಅವನು ತಾನಿಚ್ಛಿಸಿದವರನ್ನು ಕ್ಷಮಿಸುತ್ತಾನೆ ಮತ್ತು ತಾನಿಚ್ಛಿಸಿದವರನ್ನು ಶಿಕ್ಷಿಸುತ್ತಾನೆ. ಅವನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

وَلِلّٰهِ مُلْكُ السَّمٰوٰتِ وَالْاَرْضِ ۗ يَغْفِرُ
لِمَنْ يَّشَآءُ وَيُعَذِّبُ مَنْ يَّشَآءُ ۗ وَ
كَانَ اللّٰهُ غَفُوْرًا رَّحِيْمًا ﴿١٤﴾

15. ನೀವು ಸಮರಾರ್ಜಿತ ಸೊತ್ತನ್ನು ಪಡೆಯಲು ಹೊರಟಾಗ ಹಿಂದೆ ಬಿಡಲ್ಪಟ್ಟ ಈ ಜನರು- ನಮ್ಮನ್ನೂ ನಿಮ್ಮ ಜೊತೆ ಬರಲು ಬಿಡಿ ಎಂದು ನಿಮ್ಮೊಡನೆ ಖಂಡಿತ ಹೇಳುವರು.[9] ಇವರು ಅಲ್ಲಾಹನ ಆದೇಶವನ್ನು ಬದಲಿಸಿಬಿಡಬೇಕೆಂದು ಇಚ್ಛಿಸುತ್ತಾರೆ. "ಖಂಡಿತ ನೀವು ನಮ್ಮ ಜೊತೆ ಬರುವಂತಿಲ್ಲ. ಅಲ್ಲಾಹನು ಈ ಮೊದಲೇ ಇದನ್ನು ಹೇಳಿರುತ್ತಾನೆ" ಎಂದು ಅವರೊಡನೆ ಸ್ಪಷ್ಟವಾಗಿ ಹೇಳಿ ಬಿಡಿರಿ. ಇವರು- "ಇಲ್ಲ, ನೀವು ನಮ್ಮ ಬಗ್ಗೆ ಅಸೂಯೆ ಪಡುತ್ತಿ ರುವಿರಿ" ಎಂದು ಹೇಳುವರು. (ನಿಜವಾಗಿ ಇದು ಅಸೂಯೆಯ ವಿಷಯವಲ್ಲ) ಆದರೆ ಇವರು ಸರಿಯಾದ ಮಾತನ್ನು ಗ್ರಹಿಸುವುದು ಅತ್ಯಲ್ಪ.

سَيَقُوْلُ الْمُخَلَّفُوْنَ اِذَا انْطَلَقْتُمْ اِلٰى
مَغَانِمَ لِتَاْخُذُوْهَا ذَرُوْنَا نَتَّبِعْكُمْ ۚ
يُرِيْدُوْنَ اَنْ يُّبَدِّلُوْا كَلٰمَ اللّٰهِ ۗ
قُلْ لَّنْ تَتَّبِعُوْنَا كَذٰلِكُمْ قَالَ اللّٰهُ
مِنْ قَبْلُ ۚ فَسَيَقُوْلُوْنَ بَلْ تَحْسُدُوْنَنَا ۗ
بَلْ كَانُوْا لَا يَفْقَهُوْنَ اِلَّا قَلِيْلًا ﴿١٥﴾

16. ಹಿಂದೆ ಬಿಡಲ್ಪಟ್ಟ ಈ ಅರಬ್ ಹಳ್ಳಿಗರೊಡನೆ ಹೇಳಿರಿ; "ಶೀಘ್ರವೇ ನಿಮ್ಮನ್ನು ಬಹಳ ಪ್ರಬಲರಾಗಿರುವ ಜನರೊಂದಿಗೆ ಯುದ್ಧ ಮಾಡಲಿಕ್ಕಾಗಿ ಕರೆಯಲಾಗುವುದು. ಒಂದೋ ನೀವು ಅವರೊಂದಿಗೆ ಯುದ್ಧ ಮಾಡಬೇಕಾದೀತು ಅಥವಾ ಅವರು ಶರಣಾಗತರಾಗುವರು. ಆಗ ನೀವು ಧರ್ಮಯುದ್ಧದ ಆಜ್ಞೆಯನ್ನು ಪಾಲಿಸಿದರೆ, ಅಲ್ಲಾಹನು ನಿಮಗೆ ಅತ್ಯುತ್ತಮ ಪ್ರತಿಫಲ ನೀಡುವನು ಮತ್ತು ನೀವು ಈ ಹಿಂದೆ ವಿಮುಖರಾದಂತೆಯೇ ಪುನಃ ವಿಮುಖ ರಾದರೆ ಅಲ್ಲಾಹನು ನಿಮಗೆ ವೇದನಾಯುಕ್ತ ಯಾತನೆ ಕೊಡುವನು.

قُلْ لِّلْمُخَلَّفِيْنَ مِنَ الْاَعْرَابِ
سَتُدْعَوْنَ اِلٰى قَوْمٍ اُولِيْ بَاْسٍ شَدِيْدٍ
تُقَاتِلُوْنَهُمْ اَوْ يُسْلِمُوْنَ ۚ فَاِنْ تُطِيْعُوْا
يُؤْتِكُمُ اللّٰهُ اَجْرًا حَسَنًا ۚ وَاِنْ تَتَوَلَّوْا
كَمَا تَوَلَّيْتُمْ مِّنْ قَبْلُ يُعَذِّبْكُمْ
عَذَابًا اَلِيْمًا ﴿١٦﴾

17. ಕುರುಡ, ಕುಂಟ ಮತ್ತು ರೋಗಿಯು ಯುದ್ಧಕ್ಕೆ ಬರದಿದ್ದರೆ ಚಿಂತಿಲ್ಲ. ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಅನುಸರಣೆ ಮಾಡುವವನಿಗೆ ಅಲ್ಲಾಹನು ತಳಭಾಗದಲ್ಲಿ ಕಾಲುವೆಗಳು

لَيْسَ عَلَى الْاَعْمٰى حَرَجٌ وَّلَا عَلَى
الْاَعْرَجِ حَرَجٌ وَّلَا عَلَى الْمَرِيْضِ
حَرَجٌ ۗ وَمَنْ يُّطِعِ اللّٰهَ وَرَسُوْلَهٗ

9. ಅರ್ಥಾತ್- ಅಪಾಯದಿಂದ ಕೂಡಿದ ಯಾತ್ರೆಯಲ್ಲಿ ನಿಮ್ಮ ಜತೆ ಸೇರಲು ಮೈಗಳ್ಳತನ ಪ್ರದರ್ಶಿಸುತ್ತಿರುವ ಈ ವ್ಯಕ್ತಿಗಳು, ಸುಲಭದ ಜಯ ಮತ್ತು ಸಮರಾರ್ಜಿತ ಸೊತ್ತು ಸಿಗುವ ಸಾಧ್ಯತೆಯಿರುವ ದಂಡಯಾತ್ರೆಯ ವೇಳೆ ಸ್ವತಃ ಓಡೋಡಿ ಬಂದು ನಮ್ಮನ್ನೂ ಜತೆಯಲ್ಲಿ ಕೊಂಡೊಯ್ಯಿರಿ ಎಂದು ಹೇಳುವ ದಿನ ದೂರವಿಲ್ಲ.

ಹರಿಯುತ್ತಿರುವ ಸ್ವರ್ಗೋದ್ಯಾನಗಳಲ್ಲಿ ಪ್ರವೇಶ ಕೊಡುವನು. ವಿಮುಖನಾಗುವವನಿಗೆ ಅವನು ವೇದನಾಯುಕ್ತ ಯಾತನೆ ಕೊಡುವನು."

يُدْخِلْهُ جَنّٰتٍ تَجْرِيْ مِنْ تَحْتِهَا
الْاَنْهٰرُ ۚ وَمَنْ يَّتَوَلَّ يُعَذِّبْهُ عَذَابًا اَلِيْمًا ﴿١٧﴾

18. ವೃಕ್ಷದಡಿಯಲ್ಲಿ ನಿಮ್ಮೊಂದಿಗೆ ಸತ್ಯವಿಶ್ವಾಸಿಗಳು ಆಜ್ಞಾನುಸರಣೆಯ ಕರಾರು ಮಾಡುತ್ತಿದ್ದಾಗ ಅಲ್ಲಾಹನು ಅವರಿಂದ ಸಂತುಷ್ಟನಾದನು. ಅವರ ಮನಸ್ಸಿನಲ್ಲೇನಿತ್ತೆಂಬುದು ಅವನಿಗೆ ತಿಳಿದಿತ್ತು. ಆದುದರಿಂದ ಅವನು ಅವರ ಮೇಲೆ ಪ್ರಶಾಂತತೆಯನ್ನು ಇಳಿಸಿದನು.[10] ಪುರಸ್ಕಾರವಾಗಿ ಅವರಿಗೆ ಶೀಘ್ರ ವಿಜಯವನ್ನು ದಯಪಾಲಿಸಿದನು-

لَقَدْ رَضِيَ اللّٰهُ عَنِ الْمُؤْمِنِيْنَ اِذْ
يُبَايِعُوْنَكَ تَحْتَ الشَّجَرَةِ فَعَلِمَ مَا
فِيْ قُلُوْبِهِمْ فَاَنْزَلَ السَّكِيْنَةَ عَلَيْهِمْ
وَاَثَابَهُمْ فَتْحًا قَرِيْبًا ﴿١٨﴾

19. ಮತ್ತು ಅವನು ಅವರಿಗೆ ಧಾರಾಳ ಸಮರಾರ್ಜಿತ ಸೊತ್ತನ್ನು ನೀಡಿದ್ದು ಅದನ್ನು ಅವರು (ಶೀಘ್ರವೇ) ಪಡೆಯಲಿರುವರು.[11] ಅಲ್ಲಾಹನು ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

وَّمَغَانِمَ كَثِيْرَةً يَّاْخُذُوْنَهَا ۗ وَكَانَ
اللّٰهُ عَزِيْزًا حَكِيْمًا ﴿١٩﴾

20. ಅಲ್ಲಾಹ್ ನಿಮಗೆ ಧಾರಾಳ ಸಮರಾರ್ಜಿತ ಸೊತ್ತಿನ ವಾಗ್ದಾನವೀಯುತ್ತಾನೆ.[12] ನೀವು ಅದನ್ನು ಪಡೆಯಲಿರುವಿರಿ. ಸದ್ಯ ಅವನು ಈ ವಿಜಯವನ್ನು ನಿಮಗೆ ದಯಪಾಲಿಸಿರುವನು[13] ಮತ್ತು ಜನರ ಕೈಗಳು ನಿಮ್ಮ ವಿರುದ್ಧ ಏಳದಂತೆ ತಡೆದನು[14]- ಸತ್ಯವಿಶ್ವಾಸಿಗಳ ಪಾಲಿಗೆ ಇದು ಒಂದು ನಿದರ್ಶನವಾಗಲೆಂದು ಮತ್ತು ಅಲ್ಲಾಹನು ನಿಮ್ಮನ್ನು ಸನ್ಮಾರ್ಗದೆಡೆಗೆ ಸಾಗಿಸಲೆಂದು (ಹೀಗೆ ಮಾಡಲಾಗಿದೆ.)

وَعَدَكُمُ اللّٰهُ مَغَانِمَ كَثِيْرَةً تَاْخُذُوْنَهَا
فَعَجَّلَ لَكُمْ هٰذِهٖ وَكَفَّ اَيْدِيَ
النَّاسِ عَنْكُمْ ۚ وَلِتَكُوْنَ اٰيَةً لِّلْمُؤْمِنِيْنَ
وَيَهْدِيَكُمْ صِرَاطًا مُّسْتَقِيْمًا ﴿٢٠﴾

21. ಇದಲ್ಲದೆ ಅಲ್ಲಾಹನು ನೀವಿನ್ನೂ ಗಳಿಸಲು ಶಕ್ತರಾಗಿಲ್ಲದಂತಹ ಮತ್ತಷ್ಟು ಸಮರಾರ್ಜಿತ ಸೊತ್ತನ್ನೂ ನಿಮಗೆ ಕೊಡುವುದಾಗಿ ವಾಗ್ದಾನ ಮಾಡುತ್ತಾನೆ. ಅಲ್ಲಾಹನು ಅವುಗಳನ್ನು ಸುತ್ತುವರಿದಿಟ್ಟಿರುತ್ತಾನೆ.[15] ಅಲ್ಲಾಹನು ಸಕಲ ವಿಷಯಗಳ ಸಾಮರ್ಥ್ಯವುಳ್ಳವನಾಗಿದ್ದಾನೆ.

وَّاُخْرٰى لَمْ تَقْدِرُوْا عَلَيْهَا قَدْ اَحَاطَ
اللّٰهُ بِهَا ۗ وَكَانَ اللّٰهُ عَلٰى كُلِّ شَيْءٍ قَدِيْرًا ﴿٢١﴾

10. ಇಲ್ಲಿ ಪ್ರಶಾಂತತೆ ಎಂದರೆ ಒಬ್ಬ ವ್ಯಕ್ತಿ ಮಹದುದ್ದೇಶಕ್ಕಾಗಿ ಶಾಂತ ಹೃದಯದಿಂದ ಯಾವುದೇ ರೀತಿಯ ಉದ್ವಿಗ್ನತೆಯಿಲ್ಲದೆ ತನ್ನನ್ನು ಅಪಾಯಕ್ಕೆ ಒಡ್ಡಿಕೊಳ್ಳುವುದಾಗಿದೆ. ಈ ಕೆಲಸವನ್ನು ನಾನು ಮಾಡಿಯೇ ತೀರಬೇಕು, ಅದರ ಪರಿಣಾಮ ಏನಾದರೂ ಸರಿಯೇ ಎಂಬ ತೀರ್ಮಾನವನ್ನು ಅವನು ಯಾವುದೇ ರೀತಿಯ ಭಯ ಅಥವಾ ಗಾಬರಿಯಿಲ್ಲದೆ ಕೈಗೊಳ್ಳುತ್ತಾನೆ.

11. ಇದು ಖೈಬರ್ ವಿಜಯ ಮತ್ತು ಆ ವೇಳೆ ದೊರೆತ ಸಮರಾರ್ಜಿತ ಸೊತ್ತಿನ ಕಡೆಗಿರುವ ಸೂಚನೆ.

12. ಅರ್ಥಾತ್- ಖೈಬರ್‌ನ ನಂತರ ಮುಸ್ಲಿಮರಿಗೆ ನಿರಂತರವಾಗಿ ದೊರೆತ ಸರಣಿ ವಿಜಯಗಳು.

13. ಅರ್ಥಾತ್- ಹುದೈಬಿಯಾ ಸಂಧಿ. ಅಧ್ಯಾಯದ ಆರಂಭದಲ್ಲಿ ಅದನ್ನೇ ಸುಸ್ಪಷ್ಟ ವಿಜಯವೆನ್ನಲಾಗಿದೆ.

14. ಅರ್ಥಾತ್- ಹುದೈಬಿಯಾದಲ್ಲಿ ನಿಮ್ಮೊಡನೆ ಯುದ್ಧ ಮಾಡುವ ಧೈರ್ಯವನ್ನು ಸತ್ಯನಿಷೇಧಿಗಳಿಗೆ ಕೊಡಲಿಲ್ಲ. ಇಷ್ಟಾಗಿ ಬಾಹ್ಯ ಪರಿಸ್ಥಿತಿಗಳ ಆಧಾರದಲ್ಲಿ ಅವರು ನಿಮಗಿಂತ ಎಲ್ಲ ವಿಧದಲ್ಲೂ ಉತ್ತಮ ಸ್ಥಿತಿಯಲ್ಲಿದ್ದರು. ಯುದ್ಧದ ದೃಷ್ಟಿಕೋನದಿಂದ ನೋಡುವುದಿದ್ದರೆ ಅವರ ಎದುರಿಗೆ ನೀವು ದುರ್ಬಲರಾಗಿದ್ದಿರಿ.

15. ಇದು ಮಕ್ಕಾ ವಿಜಯದ ಕಡೆಗಿರುವ ಸೂಚನೆಯಾಗಿದೆ ಎಂಬುದು ಪ್ರಬಲ ಗುಮಾನಿಯಾಗಿದೆ. ಅರ್ಥಾತ್, ಮಕ್ಕಾ ಇನ್ನೂ ನಿಮ್ಮ ವಶಕ್ಕೆ

22. ಈಗ ಈ ಸತ್ಯನಿಷೇಧಿಗಳು ನಿಮ್ಮೊಂದಿಗೆ ಯುದ್ಧ ಮಾಡುತ್ತಿದ್ದರೆ ಖಂಡಿತ ಪಲಾಯನ ಮಾಡುತ್ತಿದ್ದರು ಮತ್ತು ಅವರಿಗೆ ರಕ್ಷಕ ಮಿತ್ರರಾಗಲಿ, ಸಹಾಯಕರಾಗಲಿ ಯಾರೂ ಸಿಗುತ್ತಿರಲಿಲ್ಲ.

وَلَوْ قَٰتَلَكُمُ ٱلَّذِينَ كَفَرُوا۟ لَوَلَّوُا۟ ٱلْأَدْبَٰرَ ثُمَّ لَا يَجِدُونَ وَلِيًّا وَلَا نَصِيرًا ﴿٢٢﴾

23. ಇದು ಹಿಂದಿನಿಂದಲೇ ನಡೆದು ಬರುತ್ತಿರುವ ಅಲ್ಲಾಹನ ಕಾರ್ಯವಿಧಾನವಾಗಿದೆ ಮತ್ತು ನೀವು ಅಲ್ಲಾಹನ ಕಾರ್ಯ ವಿಧಾನದಲ್ಲಿ ಯಾವ ಬದಲಾವಣೆಯನ್ನೂ ಕಾಣಲಾರಿರಿ.

سُنَّةَ ٱللَّهِ ٱلَّتِى قَدْ خَلَتْ مِن قَبْلُ ۖ وَلَن تَجِدَ لِسُنَّةِ ٱللَّهِ تَبْدِيلًا ﴿٢٣﴾

24. ಮಕ್ಕಾ ಕಣಿವೆಯಲ್ಲಿ ಅವರ ಕೈಗಳನ್ನು ನಿಮ್ಮಿಂದಲೂ ನಿಮ್ಮ ಕೈಗಳನ್ನು ಅವರಿಂದಲೂ ತಡೆದವನು ಅವನೇ. ವಸ್ತುತಃ ಅವನು ನಿಮಗೆ ಅವರ ಮೇಲೆ ಪ್ರಾಬಲ್ಯ ದಯಪಾಲಿಸಿದ್ದನು ಮತ್ತು ನೀವು ಮಾಡುತ್ತಿದ್ದುದನ್ನೆಲ್ಲ ಅಲ್ಲಾಹನು ವೀಕ್ಷಿಸುತ್ತಿದ್ದನು.

وَهُوَ ٱلَّذِى كَفَّ أَيْدِيَهُمْ عَنكُمْ وَأَيْدِيَكُمْ عَنْهُم بِبَطْنِ مَكَّةَ مِنۢ بَعْدِ أَنْ أَظْفَرَكُمْ عَلَيْهِمْ ۚ وَكَانَ ٱللَّهُ بِمَا تَعْمَلُونَ بَصِيرًا ﴿٢٤﴾

25. ಸತ್ಯವನ್ನು ನಿರಾಕರಿಸಿದವರು, 'ಮಸ್ಜಿದುಲ್ ಹರಾಮ್'ನಿಂದ ನಿಮ್ಮನ್ನು ತಡೆದವರು ಮತ್ತು 'ಹದ್ಯ್'ನ (ಬಲಿಯ) ಒಂಟೆಗಳನ್ನು ಅವುಗಳ ನೆಲೆಗೆ ತಲುಪಲು ಬಿಡದವರು ಅವರೇ. (ಮಕ್ಕಾದಲ್ಲಿ) ನೀವು ಅರಿತಿರದಂತಹ ಸತ್ಯವಿಶ್ವಾಸಿ ಪುರುಷರು ಮತ್ತು ಸತ್ಯ ವಿಶ್ವಾಸಿ ಸ್ತ್ರೀಯರು ಇಲ್ಲದಿರುತ್ತಿದ್ದರೆ, ಹಾಗೂ ಪ್ರಮಾದವಶಾತ್ ನೀವು ಅವರನ್ನು ಧ್ವಂಸ ಮಾಡಿ ಬಿಡುವ ಮತ್ತು ಇದರಿಂದ ನಿಮಗೆ ಕಳಂಕ ಬರುವ ಅಪಾಯವಿಲ್ಲದಿರುತ್ತಿದ್ದರೆ, (ಯುದ್ಧವು ತಡೆಯಲ್ಪಡುತ್ತಿರಲಿಲ್ಲ) ಅಲ್ಲಾಹನು ತಾನಿಚ್ಛಿಸಿದವರನ್ನು ತನ್ನ ಕೃಪೆಯಲ್ಲಿ ಸೇರಿಸಿಕೊಳ್ಳುವಂತಾಗಲು(ಯುದ್ಧವು ತಡೆಯಲ್ಪಟ್ಟಿತು.) ಆ ಸತ್ಯವಿಶ್ವಾಸಿಗಳು ಬೇರ್ಪಟ್ಟಿರುತ್ತಿದ್ದರೆ (ಮಕ್ಕಾ ವಾಸಿಗಳಲ್ಲಿ) ಸತ್ಯನಿಷೇಧಿಗಳಿಗೆ ನಾವು ಖಂಡಿತವಾಗಿಯೂ ವೇದನಾಯುಕ್ತ ಯಾತನೆ ಕೊಡುತ್ತಿದ್ದೆವು.[16]

هُمُ ٱلَّذِينَ كَفَرُوا۟ وَصَدُّوكُمْ عَنِ ٱلْمَسْجِدِ ٱلْحَرَامِ وَٱلْهَدْىَ مَعْكُوفًا أَن يَبْلُغَ مَحِلَّهُۥ ۚ وَلَوْلَا رِجَالٌ مُّؤْمِنُونَ وَنِسَآءٌ مُّؤْمِنَٰتٌ لَّمْ تَعْلَمُوهُمْ أَن تَطَـُٔوهُمْ فَتُصِيبَكُم مِّنْهُم مَّعَرَّةٌۢ بِغَيْرِ عِلْمٍ ۖ لِّيُدْخِلَ ٱللَّهُ فِى رَحْمَتِهِۦ مَن يَشَآءُ ۚ لَوْ تَزَيَّلُوا۟ لَعَذَّبْنَا ٱلَّذِينَ كَفَرُوا۟ مِنْهُمْ عَذَابًا أَلِيمًا ﴿٢٥﴾

ಬಂದಿಲ್ಲ. ಆದರೆ ಅಲ್ಲಾಹನು ಅದನ್ನು ಆವರಿಸಿ ಕೊಂಡಿದ್ದಾನೆ. ಹುದೈಬಿಯಾದ ವಿಜಯದಿಂದಾಗಿ ಅದೂ ನಿಮ್ಮ ವಶವಾಗುವುದು.

16. ಅಲ್ಲಾಹನು ಹುದೈಬಿಯಾದಲ್ಲಿ ಯುದ್ಧಕ್ಕೆ ಅವಕಾಶ ಕಲ್ಪಿಸದಿರುವುದರ ಹಿಂದಿನ ಔಚಿತ್ಯ ಇದುವೇ ಆಗಿತ್ತು. ತಮ್ಮ ಸತ್ಯವಿಶ್ವಾಸವನ್ನು ಗೋಪ್ಯವಾಗಿಸಿಕೊಂಡ ಮತ್ತು ಸತ್ಯವಿಶ್ವಾಸ ಬಹಿರಂಗಗೊಂಡಿದ್ದರೂ ತಮ್ಮ ಅಸಹಾಯಕತೆಯಿಂದಾಗಿ ಮದೀನಾ ವಲಸೆ ಕೈಗೊಳ್ಳಲು ಸಾಧ್ಯವಾಗದೆ ಶೋಷಣೆ-ದಬ್ಬಾಳಿಕೆಗಳಿಗೆ ಗುರಿಯಾಗುತ್ತಿದ್ದಂತಹ ಅಸಂಖ್ಯ ಮುಸ್ಲಿಮ್ ಸ್ತ್ರೀ-ಪುರುಷರು ಮಕ್ಕಾದಲ್ಲಿದ್ದರು. ಇಂತಹ ಸಂದರ್ಭದಲ್ಲಿ ಯುದ್ಧ ನಡೆಯುತ್ತಿದ್ದರೆ ಮತ್ತು ಮುಸ್ಲಿಮರು ಸತ್ಯನಿಷೇಧಿಗಳನ್ನು ಹೊಸಕಿ ಹಾಕಿ ಮಕ್ಕಾ ಪ್ರವೇಶ ಮಾಡುತ್ತಿದ್ದರೆ ಅಲ್ಲಿನ ಸತ್ಯನಿಷೇಧಿಗಳ ಜತೆಗೆ ಮುಸ್ಲಿಮರೂ ಅಜ್ಞಾನದಿಂದಾಗಿ ಮುಸ್ಲಿಮರ ಕೈಯಿಂದಲೇ ಹತರಾಗಿ ಬಿಡುತ್ತಿದ್ದರು. ಈ ದೇವೇಚ್ಛೆಯ ಹಿಂದೆ ಇನ್ನೊಂದು ಯುಕ್ತಿಯೂ ಅಡಕವಾಗಿತ್ತು. ಅಲ್ಲಾಹನು ಕುರೈಶರನ್ನು ರಕ್ತರಂಜಿತ ಯುದ್ಧದ ಮೂಲಕ ಸೋಲಿಸಿ ಮಕ್ಕಾ ವಿಜಯವನ್ನು ದೊರಕಿಸಬೇಕೆಂದು ಬಯಸಿರಲಿಲ್ಲ. ಎರಡು ವರ್ಷಗಳ ಅವಧಿಯಲ್ಲಿ ಅವರ ಮೇಲೆ ನಾಲ್ಕೂ ನಿಟ್ಟಿನಿಂದ ಮುತ್ತಿಗೆ ಹಾಕಿ, ಯಾವುದೇ ರೀತಿಯ ಪ್ರತಿರೋಧವಿಲ್ಲದೆ ಅವರು ಅಧೀನರಾಗಿ ಬಿಡಬೇಕು ಅನಂತರ ಸಮಸ್ತ ಗೋತ್ರ ಇಸ್ಲಾಮ್ ಸ್ವೀಕರಿಸಿ ಅಲ್ಲಾಹನ ಅನುಗ್ರಹದೊಳಗೆ

26. (ಈ ಕಾರಣದಿಂದಲೇ) ಆ ಸತ್ಯನಿಷೇಧಿಗಳು ತಮ್ಮ ಹೃದಯಗಳಲ್ಲಿ ಅಜ್ಞಾನಜನ್ಯ ಅಭಿಮಾನವನ್ನಿರಿಸಿಕೊಂಡಾಗ ಅಲ್ಲಾಹನು ತನ್ನ ಸಂದೇಶವಾಹಕರ ಮತ್ತು ಸತ್ಯವಿಶ್ವಾಸಿಗಳ ಮೇಲೆ ಪ್ರಶಾಂತತೆಯನ್ನು ಇಳಿಸಿದನು[17] ಮತ್ತು ಸತ್ಯವಿಶ್ವಾಸಿಗಳನ್ನು ದೇವಭಕ್ತಿಯ ನುಡಿಗೆ ಬದ್ಧರಾಗಿರುವಂತೆ ಮಾಡಿದನು. ಏಕೆಂದರೆ ಇದಕ್ಕೆ ಅವರೇ ಹೆಚ್ಚು ಹಕ್ಕುದಾರರೂ ಅರ್ಹರೂ ಆಗಿದ್ದರು. ಅಲ್ಲಾಹನು ಸಕಲ ವಿಷಯಗಳ ಜ್ಞಾನವುಳ್ಳವನಾಗಿರುತ್ತಾನೆ.

إِذْ جَعَلَ الَّذِينَ كَفَرُوا فِي قُلُوبِهِمُ
الْحَمِيَّةَ حَمِيَّةَ الْجَاهِلِيَّةِ فَأَنزَلَ اللَّهُ
سَكِينَتَهُ عَلَىٰ رَسُولِهِ وَعَلَى الْمُؤْمِنِينَ
وَأَلْزَمَهُمْ كَلِمَةَ التَّقْوَىٰ وَكَانُوا
أَحَقَّ بِهَا وَأَهْلَهَا ۚ وَكَانَ اللَّهُ
بِكُلِّ شَيْءٍ عَلِيمًا ﴿٢٦﴾

27. ನಿಜಕ್ಕೂ ಅಲ್ಲಾಹನು ತನ್ನ ಸಂದೇಶವಾಹಕರಿಗೆ ಸಂಪೂರ್ಣವಾಗಿ ಸತ್ಯಕ್ಕೆ ಅನುಗುಣವಾದ ಕನಸನ್ನೇ ತೋರಿಸಿದ್ದನು.[18] ಅಲ್ಲಾಹನಿಚ್ಛಿಸಿದರೆ, ನೀವು ಖಂಡಿತವಾಗಿಯೂ ಸಂಪೂರ್ಣ ಶಾಂತಿಯೊಂದಿಗೆ ಮಸ್ಜಿದುಲ್ ಹರಾಮನ್ನು ಪ್ರವೇಶಿಸುವಿರಿ.[19] ನಿಮ್ಮ ತಲೆ ಬೋಳಿಸಿಕೊಳ್ಳುವಿರಿ ಮತ್ತು ಕೂದಲು ಕತ್ತರಿಸಿಕೊಳ್ಳುವಿರಿ ಮತ್ತು ನಿಮಗೆ ಯಾವ ಭಯವೂ ಇರಲಾರದು. ನೀವು ಅರಿಯದಿದ್ದುದನ್ನು ಅವನು ಅರಿತಿದ್ದನು. ಆದುದರಿಂದ ಆ ಕನಸು ನೆರವೇರುವುದಕ್ಕೆ ಮುಂಚೆ ಅವನು ಈ ಸನ್ನಿಹಿತ ವಿಜಯವನ್ನು ನಿಮಗೆ ದಯಪಾಲಿಸಿದನು.

لَّقَدْ صَدَقَ اللَّهُ رَسُولَهُ الرُّؤْيَا
بِالْحَقِّ ۖ لَتَدْخُلُنَّ الْمَسْجِدَ الْحَرَامَ
إِن شَاءَ اللَّهُ آمِنِينَ مُحَلِّقِينَ
رُءُوسَكُمْ وَمُقَصِّرِينَ لَا تَخَافُونَ ۖ
فَعَلِمَ مَا لَمْ تَعْلَمُوا فَجَعَلَ مِن دُونِ
ذَٰلِكَ فَتْحًا قَرِيبًا ﴿٢٧﴾

28. ತನ್ನ ಸಂದೇಶವಾಹಕನನ್ನು ಸನ್ಮಾರ್ಗ ಹಾಗೂ ಸತ್ಯಧರ್ಮದೊಂದಿಗೆ ಕಳುಹಿಸಿದವನು ಅಲ್ಲಾಹನೇ ಆಗಿರುತ್ತಾನೆ. ಅದನ್ನು ಸಕಲಧರ್ಮಗಳ ಮೇಲೆ ಪ್ರಬಲಗೊಳಿಸಲಿಕ್ಕಾಗಿ (ಅವನು ಹೀಗೆ ಮಾಡಿರುವನು). ಈ ವಸ್ತುಸ್ಥಿತಿಯ ಬಗ್ಗೆ ಅಲ್ಲಾಹನ ಸಾಕ್ಷ್ಯವೇ ಸಾಕು.[20]

هُوَ الَّذِي أَرْسَلَ رَسُولَهُ بِالْهُدَىٰ
وَدِينِ الْحَقِّ لِيُظْهِرَهُ عَلَى الدِّينِ
كُلِّهِ ۚ وَكَفَىٰ بِاللَّهِ شَهِيدًا ﴿٢٨﴾

---

ಪ್ರವೇಶ ಮಾಡಬೇಕೆಂಬುದು ದೇವೇಚ್ಛೆಯಾಗಿತ್ತು. ಮಕ್ಕಾ ವಿಜಯದ ವೇಳೆ ಅದುವೇ ಸಂಭವಿಸಿತು.

17. ಇಲ್ಲಿ ಪ್ರಶಾಂತತೆ ಎಂದರೆ ಸತ್ಯನಿಷೇಧಿಗಳ ಅಜ್ಞಾನಜನ್ಯ ದುರಭಿಮಾನವನ್ನು ಎದುರಿಸಲು ಪ್ರವಾದಿವರ್ಯರು(ಸ) ಮತ್ತು ಮುಸ್ಲಿಮರು ತೋರಿದ ಸಹನೆ ಮತ್ತು ಗಾಂಭೀರ್ಯವಾಗಿದೆ. ಅವರ ಹಟಮಾರಿತನ ಮತ್ತು ವ್ಯಕ್ತವಾದ ಅತಿಕ್ರಮದಿಂದ ಉದ್ರಿಕ್ತರಾಗಿ ಅವರು ನಿಯಂತ್ರಣ ಕಳೆದುಕೊಳ್ಳಲಿಲ್ಲ. ಅವುಗಳ ವಿರುದ್ಧ ಸತ್ಯಕ್ಕೆ ವಿರುದ್ಧವಾದ ಅಥ'ವಾ ಪರಿಸ್ಥಿತಿಯನ್ನು ಸುಧಾರಿಸುವ ಬದಲು ಬಿಗಡಾಯಿಸಿ ಬಿಡಬಹುದಾದಂತಹ ಯಾವುದೇ ಕ್ರಮವನ್ನು ಅವರು ಕೈಗೊಳ್ಳಲಿಲ್ಲ.

18. ಇದು ಬಾರಿ ಬಾರಿಗೂ ಮುಸ್ಲಿಮರ ಮನಸ್ಸನ್ನು ಕಾಡುತ್ತಿದ್ದ ಪ್ರಶ್ನೆಗೆ ನೀಡಲಾದ ಉತ್ತರ. ಮಸ್ಜಿದುಲ್ ಹರಾಮ್‌ನೊಳಗೆ ಪ್ರವೇಶಿಸಿ ಅಲ್ಲಾಹನ ಭವನದ ಪ್ರದಕ್ಷಿಣೆ ಮಾಡುತ್ತಿರುವುದಾಗಿ ಪ್ರವಾದಿವರ್ಯರು(ಸ) ಕನಸು ಕಂಡಿದ್ದಾರೆ. ಆದರೆ ನಾವಾದರೋ ಉಮ್ರಾವನ್ನೂ ಮಾಡದೆ ಹಿಂದಿರುಗುತ್ತಿದ್ದೇವೆ. ಇದೇಕೆ ಹೀಗಾಯಿತು?

19. ಈ ಆಶ್ವಾಸನೆ ಮುಂದಿನ ವರ್ಷ 'ದುಲ್‌ಕಅದ್' ಹಿ.ಶ. 7ರಲ್ಲಿ ಈಡೇರಿತು. ಇತಿಹಾಸದಲ್ಲಿ ಈ ಉಮ್ರಾ 'ಉಮ್ರತುಲ್ ಕಝಾ' ಎಂಬ ಹೆಸರಿನಿಂದ ಪ್ರಸಿದ್ಧವಿದೆ.

20. ಈ ಸಂದರ್ಭದಲ್ಲಿ ಪ್ರಸ್ತುತ ಮಾತು ಹೇಳಲು ಕಾರಣವೇನೆಂದರೆ, ಹುದೈಬಿಯಾದಲ್ಲಿ ಶಾಂತಿ ಒಡಂಬಡಿಕೆಯನ್ನು ಬರೆಯಲಾಗುತ್ತಿದ್ದ ಸಂದರ್ಭದಲ್ಲಿ ಪ್ರವಾದಿವರ್ಯರ(ಸ) ಹೆಸರಿನ ಜತೆಗೆ 'ರಸೂಲುಲ್ಲಾಹ್' (ಅಲ್ಲಾಹನ ಪ್ರವಾದಿ) ಎಂಬ ಪದವನ್ನು ಬರೆಯುವ ಬಗ್ಗೆ ಮಕ್ಕಾದ ಸತ್ಯನಿಷೇಧಿಗಳು ಆಕ್ಷೇಪ ವ್ಯಕ್ತಪಡಿಸಿದರು. ಅದಕ್ಕಾಗಿ, ಮುಹಮ್ಮದ್‌ರು(ಸ) ಓರ್ವ ಪ್ರವಾದಿಯಾಗಿದ್ದಾರೆ ಎಂಬ ವಿಚಾರ ಒಂದು

29. ಮುಹಮ್ಮದ್ ಅಲ್ಲಾಹನ ಸಂದೇಶವಾಹಕರಾಗಿರುತ್ತಾರೆ. ಅವರ ಜೊತೆಗಿರುವವರು ಸತ್ಯನಿಷೇಧಿಗಳ ಪಾಲಿಗೆ ಕಠಿಣರೂ[21] ಪರಸ್ಪರ ಕರುಣಾಳುಗಳೂ[22] ಆಗಿರುತ್ತಾರೆ. ಅವರು ಬಾಗಿರುವ ಮತ್ತು ಸಾಷ್ಟಾಂಗವೆರಗಿರುವ ಸ್ಥಿತಿಯಲ್ಲಿ ಇರುವುದನ್ನು ಹಾಗೂ ಅಲ್ಲಾಹನ ಅನುಗ್ರಹ ಮತ್ತು ಅವನ ಸಂಪ್ರೀತಿಯನ್ನು ಅರಸುವುದರಲ್ಲಿ ತಲ್ಲೀನರಾಗಿರುವುದನ್ನು ನೀವು ಕಾಣುವಿರಿ. ಸಾಷ್ಟಾಂಗವೆರಗಿದುದರ ಗುರುತುಗಳು ಅವರ ಮುಖಗಳಲ್ಲಿವೆ. ಆ ಮೂಲಕ ಅವರು ಪ್ರತ್ಯೇಕವಾಗಿ ಗುರುತಿಸಲ್ಪಡುತ್ತಾರೆ.[23] ಇದು ತೌರಾತ್‌ನಲ್ಲಿರುವ, ಅವರ ಗುಣವಿಶೇಷವಾಗಿದೆ. ಇಂಜೀಲ್‌ನಲ್ಲಿ ಅವರ ಉದಾಹರಣೆಯನ್ನು ಹೀಗೆ ಕೊಡಲಾಗಿದೆ. ಒಂದು ಪೈರು, ಅದು ಮೊದಲು ಮೊಳೆಯಿತು, ತರುವಾಯ ಅದನ್ನು ಬಲಪಡಿಸಿತು, ಅನಂತರ ಅದು ಪಕ್ವವಾಯಿತು, ಆ ಬಳಿಕ ತನ್ನ ಕಾಂಡದ ಮೇಲೆ ನಿಂತು ಬಿಟ್ಟಿತು. ಕೃಷಿ ಮಾಡುವವರನ್ನು ಅದು ಸಂತೋಷಪಡಿಸುತ್ತದೆ- ಸತ್ಯನಿಷೇಧಿಗಳು ಅವುಗಳ ಬೆಳವಣಿಗೆಯ ಬಗ್ಗೆ ಅಸೂಯೆ ಪಡುವಂತಾಗಲು. ಸತ್ಯವಿಶ್ವಾಸವಿರಿಸಿಕೊಂಡು ಸತ್ಕರ್ಮವೆಸಗಿದ ಕೂಟದವರಿಗೆ ಅಲ್ಲಾಹನು ಕ್ಷಮೆ ಮತ್ತು ಅತಿ ದೊಡ್ಡ ಪ್ರತಿಫಲದ ವಾಗ್ದಾನವಿತ್ತಿರುತ್ತಾನೆ.

مُحَمَّدٌ رَّسُوْلُ اللّٰهِ ؕ وَ الَّذِيْنَ مَعَهٗۤ
اَشِدَّآءُ عَلَى الْكُفَّارِ رُحَمَآءُ بَيْنَهُمْ
تَرٰىهُمْ رُكَّعًا سُجَّدًا يَّبْتَغُوْنَ فَضْلًا
مِّنَ اللّٰهِ وَرِضْوَانًا ؗ سِيْمَاهُمْ فِىْ
وُجُوْهِهِمْ مِّنْ اَثَرِ السُّجُوْدِ ؕ ذٰلِكَ
مَثَلُهُمْ فِى التَّوْرٰىةِ ۛۚ وَمَثَلُهُمْ فِى
الْاِنْجِيْلِ ۛۚ كَزَرْعٍ اَخْرَجَ شَطْـَٔهٗ
فَاٰزَرَهٗ فَاسْتَغْلَظَ فَاسْتَوٰى عَلٰى
سُوْقِهٖ يُعْجِبُ الزُّرَّاعَ لِيَغِيْظَ بِهِمُ
الْكُفَّارَ ؕ وَعَدَ اللّٰهُ الَّذِيْنَ اٰمَنُوْا
وَعَمِلُوا الصّٰلِحٰتِ مِنْهُمْ مَّغْفِرَةً
وَّ اَجْرًا عَظِيْمًا ۠ ﴿٢٩﴾

---

ವಾಸ್ತವಿಕತೆಯಾಗಿದೆ. ಅದನ್ನು ಯಾರಾದರೂ ನಂಬುವುದರಿಂದ ಅಥವಾ ನಂಬದಿರುವುದರಿಂದ ಯಾವುದೇ ವ್ಯತ್ಯಾಸ ಉಂಟಾಗುವುದಿಲ್ಲ. ಅದನ್ನು ಕೆಲವರು ನಂಬಲು ಸಿದ್ಧರಿಲ್ಲವೆಂದಾದರೆ ಅವರು ನಂಬದಿರಲಿ. ಅವರು ಪ್ರವಾದಿಯಾಗಿದ್ದಾರೆ ಎಂಬ ವಾಸ್ತವಿಕತೆಗೆ ಅಲ್ಲಾಹನ ಸಾಕ್ಷ್ಯವಷ್ಟೇ ಸಾಕು ಎಂದು ಹೇಳಲಾಗಿದೆ.

21. ಅರಬಿ ಭಾಷೆಯಲ್ಲಿ 'ಫುಲಾನುನ್ ಶದೀದುನ್ ಅಲೈಹಿ' ಅರ್ಥಾತ್ ಆ ವ್ಯಕ್ತಿ ಅವನ ಪಾಲಿಗೆ ಕಠೋರನಾಗಿದ್ದಾನೆ ಎಂದು ಹೇಳಲಾಗುತ್ತದೆ. ಅದರ ಅರ್ಥ ಅವನನ್ನು ಮಣಿಸುವುದು, ಅಧೀನಗೊಳಿಸುವುದು ಮತ್ತು ತನ್ನ ಅಭೀಷ್ಟಕ್ಕೆ ಬದ್ಧಗೊಳಿಸುವುದು ತ್ರಾಸದಾಯಕ ಎಂದಾಗಿದೆ. ಪ್ರವಾದಿವರ್ಯರ(ಸ) ಅನುಚರರು ಸತ್ಯನಿಷೇಧಿಗಳ ಪಾಲಿಗೆ ಕಠೋರರಾಗಿದ್ದಾರೆ ಎಂದರೆ ಅವರನ್ನು ಮೇಣದಿಂದ ರಚಿಸಿದ ಗೊಂಬೆಯಂತೆ ಸತ್ಯನಿಷೇಧಿಗಳು ಯಾವ ಕಡೆಗೆ ಬೇಕಾದರೂ ತಿರುಗಿಸಲು ಸಾಧ್ಯವಿಲ್ಲ. ಸತ್ಯನಿಷೇಧಿಗಳಿಗೆ ಸುಲಭವಾಗಿ ನುಂಗಲು ಸಾಧ್ಯವಾಗುವ ಮೇವಿನಂತೆ ಅವರು ಇರಲಾರರು. ಅವರನ್ನು ಯಾವುದೇ ರೀತಿಯ ಬೆದರಿಕೆಯಿಂದ ಮಣಿಸಲು ಸಾಧ್ಯವಿಲ್ಲ. ಯಾವುದೇ ರೀತಿಯ ಪ್ರಲೋಭನೆಯಿಂದ ಅವರನ್ನು ಖರೀದಿಸಲು ಸಾಧ್ಯವಿಲ್ಲ. ಯಾವ ಉನ್ನತ ಉದ್ದೇಶಕ್ಕಾಗಿ ಅವರು ಜೀವದ ಹಂಗು ತೊರೆದು ಪ್ರವಾದಿವರ್ಯರೊಂದಿಗೆ(ಸ) ಸಹಕರಿಸಲು ಸನ್ನದ್ಧರಾಗಿದ್ದಾರೋ ಅದರಿಂದ ವಿಮುಖಗೊಳಿಸುವ ಶಕ್ತಿ ಸತ್ಯನಿಷೇಧಿಗಳಲ್ಲಿಲ್ಲ.

22. ಅರ್ಥಾತ್- ಅವರ ಕಠೋರತೆ ಏನಿದ್ದರೂ ಅದು ಧರ್ಮದ ಶತ್ರುಗಳ ಪಾಲಿಗೆ ಮಾತ್ರ. ಸತ್ಯವಿಶ್ವಾಸಿಗಳ ಪಾಲಿಗಲ್ಲ. ಸತ್ಯವಿಶ್ವಾಸಿಗಳ ಪಾಲಿಗೆ ಅವರು ಮೃದು ಹೃದಯಿಗಳಾಗಿದ್ದಾರೆ. ಕರುಣಾಳುಗಳೂ, ಪ್ರೀತ್ಯಾದರ ಉಳ್ಳವರೂ, ಸಹಾನುಭೂತಿ ಮತ್ತು ಸ್ಪಂದನ ಹೊಂದಿದವರೂ ಆಗಿದ್ದಾರೆ. ತತ್ವಾದರ್ಶ ಮತ್ತು ಉದ್ದೇಶದ ಸಾಮ್ಯತೆಯು ಅವರ ನಡುವೆ ಪರಸ್ಪರ ಪ್ರೀತಿ, ಹಿತಚಿಂತನೆ ಮತ್ತು ಹೊಂದಾಣಿಕೆಯನ್ನು ಬೆಳೆಸಿದೆ.

23. ಕೆಲವು ನಮಾಝ್ ಮಾಡುವವರ ಹಣೆಯಲ್ಲಿ ದಡ್ಡುಗಟ್ಟಿದ ಕಲೆಯ ಕುರಿತು ಈ ಮಾತು ಹೇಳಲಾಗಿಲ್ಲ. ಬದಲಾಗಿ ಇದರ ಅರ್ಥ ದೇವನ ಮುಂದೆ ಬಾಗುವುದರಿಂದ ಸ್ವಾಭಾವಿಕವಾಗಿಯೇ ವ್ಯಕ್ತಿಯ ಮುಖದಲ್ಲಿ ವ್ಯಕ್ತವಾಗುವ ದೇವಭಯ, ಮೃದುಹೃದಯ, ಸಜ್ಜನಿಕೆ ಮತ್ತು ಸಚ್ಚಾರಿತ್ರ್ಯದ ಲಕ್ಷಣಗಳಾಗಿವೆ. ಮುಹಮ್ಮದ್‌ರ(ಸ) ಸಂಗಾತಿಗಳು ಹೇಗಿದ್ದರೆಂದರೆ ಜನರು ಅವರನ್ನು ನೋಡಿದ ತಕ್ಷಣ ಇವರು ಸಚ್ಚರಿತರಾಗಿದ್ದಾರೆ ಎಂದು ಅರಿತುಕೊಳ್ಳುತ್ತಾರೆ. ಏಕೆಂದರೆ ಅವರ ಮುಖ ದೇವಭಕ್ತಿಯ ಕಾಂತಿಯಿಂದ ಪ್ರಜ್ವಲಿಸುತ್ತಿರುತ್ತದೆ ಎಂದು ಹೇಳುವುದು ಅಲ್ಲಾಹನ ಮಾತಿನ ಇಂಗಿತವಾಗಿದೆ.